2017 ಕ.ತೀ.ವ. 225

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

## ಶ್ರೀಮತಿ ಎನ್. ತ್ರಿವೇಣಿ –ವಿರುದ್ಧ– ಶ್ರೀ ಜಿ.ಟಿ. ಶಂಕರ್*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – ಕ್ರಮಾದೇಶ 7 ನಿಯಮ 11ರಡಿ ಅರ್ಜಿ.

ಮೂಲ ದಾವೆ ಸಂಖ್ಯೆ. 3353/2014ರಲ್ಲಿ ಬೆಂಗಳೂರಿನ VIIIನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಹೊರಡಿಸಿದ ವಾದಕಾಲೀನ ಅರ್ಜಿ ಸಂಖ್ಯೆ 3/ತೀರ್ಪಿಗೆ ಸಂಬಂಧಿಸಿದ ಆದೇಶವನ್ನು ಪ್ರಶ್ನಿಸಿ, ಈ ಅಪೀಲನ್ನು ಸಲ್ಲಿಸಲಾಗಿದೆ. ಸದರಿ ಆದೇಶದ ಮೂಲಕ ವಾದಪತ್ರವನ್ನು ತಿರಸ್ಕರಿಸಲಾಗಿದೆ ಮತ್ತು ದಾವೆಯನ್ನು ಕಾನೂನಿನಿಂದ ಪ್ರತಿಷೇಧಿತವಾಗಿದೆಯೆಂದು ಹಾಗೂ ಸಮರ್ಥನೀಯವಾಗಿಲ್ಲವೆಂದು ವಜಾ ಮಾಡಲಾಗಿದೆ. ಸಿಪಿಸಿ 7ನೇ ಕ್ರಮಾದೇಶದ 11ನೇ ನಿಯಮದಡಿ ಅಧಿಕಾರ ಚಲಾಯಿಸುವ ಹಂತದಲ್ಲಿ, ವಾದಪತ್ರದಲ್ಲಿನ ದೃಢೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ದಾವೆಯು ಯಾವುದೇ ಕಾನೂನಿನಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದಪತ್ರವನ್ನು ತಿರಸ್ಕರಿಸಬಹುದಾಗಿದೆ. ಇಲ್ಲದಿದ್ದಲ್ಲಿ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ. ಪ್ರಶ್ನಿತ ತೀರ್ಪು ಮತ್ತು ಐತೀರ್ಪು ಕಾನೂನುಬಾಹಿರವಾಗಿದೆಯೆಂದು, ಅದನ್ನು ಬದಿಗಿರಿಸಲಾಗಿದೆ ಹಾಗೂ ದಾವೆಯನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಲಾಗಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ನಿಯತ ಮೊದಲನೇ ಅಪೀಲನ್ನು ಪುರಸ್ಕರಿಸಿದೆ.

* ಆರ್‌ಎಫ್‌ಎ ಸಂಖ್ಯೆ.: 1194/2014, ದಿನಾಂಕ: 1ನೇ ಏಪ್ರಿಲ್, 2016.

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. (2007) 14 ಎಸ್‌ಸಿಸಿ 183<br>ಸಿ. ನಟರಾಜನ್ –ವಿರುದ್ಧ– ಅಶಿಮ್ ಬಾಯ್* | *(ಉಲ್ಲೇ) 6* |
| *2. (2007) 10 ಎಸ್‌ಸಿಸಿ 59<br>ರಾಮ್‌ಪ್ರಕಾಶ್ ಗುಪ್ತ –ವಿರುದ್ಧ–<br>ರಾಜೀವ್ ಕುಮಾರ್ ಗುಪ್ತ* | *(ಉಲ್ಲೇ) 6* |
| *3. (2007) 5 ಎಸ್‌ಸಿಸಿ 614<br>ಹರ್‌ದೇಶ್ ಓರ್ಸ್ (ಪ್ರೈ) ಲಿ. –ವಿರುದ್ಧ–<br>ಹೆಡೆ ಅಂಡ್ ಕಂ* | *(ಉಲ್ಲೇ) 6* |
| *4. (2006) 3 ಎಸ್‌ಸಿಸಿ 100<br>ಮಯರ್ (ಎಚ್.ಕೆ.) ಲಿ., –ವಿರುದ್ಧ–<br>ವೆಸ್ಸೆಲ್ ಎಂ.ವಿ. ಫಾರ್ಚೂನ್ ಎಕ್ಸ್‌ಪ್ರೆಸ್* | *(ಉಲ್ಲೇ) 6* |
| *5. (2004) 3 ಎಸ್‌ಸಿಸಿ 137<br>ಸೊಪನ್ ಸುಖದೇವ್ ಸಬ್ಲಿ –ವಿರುದ್ಧ–<br>ಅಸಿಸ್ಟೆಂಟ್ ಚಾರಿಟಿ ಕಮೀಷನರ್* | *(ಉಲ್ಲೇ) 6* |
| *6. (2003), 1 ಎಸ್‌ಸಿಸಿ 577<br>ಸಲೀಂ ಭಾಯ್ –ವಿರುದ್ಧ–<br>ಸ್ಟೇಟ್ ಆಫ್ ಮಹಾರಾಷ್ಟ್ರ* | *(ಉಲ್ಲೇ) 6* |
| *7. (2012) 8 ಎಸ್‌ಸಿಸಿ 701<br>ಭಾವುರಾಮ್ –ವಿರುದ್ಧ–<br>ಜನಕ್ ಸಿಂಗ್ ಮತ್ತು ಇತರರು* | *(ಉಲ್ಲೇ) 6* |

8. *(2012)8 ಎಸ್‌ಸಿಸಿ 706*
*ಚರ್ಚ್ ಆಫ್ ಕ್ರೈಸ್ಟ್ ಚಾರಿಟಬಲ್ ಟ್ರಸ್ಟ್*
*ಅಂಡ್ ಎಜುಕೇಶನಲ್ ಚಾರಿಟಬಲ್ ಸೊಸೈಟಿ*
*–ವಿರುದ್ಧ– ಪೊನ್ನಿಯಮ್ಮನ್ ಎಜುಕೇಷನಲ್ ಟ್ರಸ್ಟ್ (ಉಲ್ಲೇ) 6*

9. *ಐಎಲ್‌ಆರ್ 2013 ಕೆಎಆರ್ 3903*
*ಯಶವಂತ್ –ವಿರುದ್ಧ– ಸೀನಿಯರ್ ಮ್ಯಾನೇಜರ್*
*ಎ.ಬಿ.ಎನ್. ಅಮ್ರೋ ಬ್ಯಾಂಕ್ ಎನ್.ವಿ., ನವದೆಹಲಿ (ಉಲ್ಲೇ) 7*

ಅಪೀಲುದಾರರ ಪರ : ಶ್ರೀ ಸಮೀರ್ ಎಸ್.ಎನ್. ವಕೀಲರು,
ಪ್ರತ್ಯಪೀಲುದಾರರ ಪರ : ಶ್ರೀ ಟಿ.ಪಿ. ವಿವೇಕಾನಂದ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ :**

ಮೂಲ ದಾವೆ ಸಂಖ್ಯೆ: 3353/2014ರಲ್ಲಿ ಬೆಂಗಳೂರಿನ VIIIನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ವಾದಕಾಲೀನ ಅರ್ಜಿ ಸಂಖ್ಯೆ. 3/ತೀರ್ಪಿಗೆ ಸಂಬಂಧಿಸಿದ ಆದೇಶವನ್ನು ಪ್ರಶ್ನಿಸಿ, ಈ ಅಪೀಲನ್ನು ಸಲ್ಲಿಸಲಾಗಿರುತ್ತದೆ. ಸದರಿ ಆದೇಶದ ಮೂಲಕ ವಾದಪತ್ರವನ್ನು ತಿರಸ್ಕರಿಸಲಾಗಿದ್ದು, ಅಷ್ಟೇ ಅಲ್ಲದೆ, ದಾವೆಯನ್ನು, ಕಾನೂನಿನಿಂದ ಪ್ರತಿಷೇಧಿತವಾಗಿದೆಯೆಂದೂ ಹಾಗೂ ಸಮರ್ಥನೀಯವಾಗಿಲ್ಲವೆಂದೂ ವಜಾ ಮಾಡಲಾಗಿರುತ್ತದೆ.

2. ವಾದಿಯ ವಾದಪತ್ರದ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನ ಮತ್ತು ಅನುಭೋಗದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಪ್ರತಿವಾದಿಯನ್ನು

ನಿರ್ಬಂಧಿಸುವ ಶಾಶ್ವತ ನಿರ್ಬಂಧಕಾಜ್ಞೆಯ ಡಿಕ್ರಿ ಹೊರಡಿಸಲು ದಿನಾಂಕ: 28.4.2014ರಂದು ದಾವೆ ಹೂಡಲಾಗಿತ್ತು. ಪ್ರತಿವಾದಿಯು ಹಾಜರಾಗಿ, ದಾವೆಯ ಅನುಸೂಚಿತ ಸ್ವತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರದ ಸ್ವಾಧೀನದ ವಸ್ತು ವಿಷಯವಾಗಿದೆಯೆಂದು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸದ ಲೇಔಟನ್ನು ರಚಿಸಿದೆಯೆಂದು ಮತ್ತು ಪ್ರಶ್ನೆಯಲ್ಲಿರುವ ಸ್ವತ್ತು ಮೂಲೆ ನಿವೇಶನವಾಗಿದ್ದು (ಕಾರ್ನರ್‌ಸೈಟ್) ಹರಾಜು ಮಾರಾಟಕ್ಕೆ ಅನುಸೂಚಿತವಾಗಿದೆಯೆಂದು ಹಾಗೂ ಶ್ರೀಮತಿ ಕೆ. ಸರಸ್ವತಿ ಗರಿಷ್ಠ ಬಿಡ್ಡರ್ ಆಗಿದ್ದಾರೆಂದು ಹಾಗೂ ಕ್ರಯಪತ್ರವನ್ನು ಆಕೆಯ ಹೆಸರಿನಲ್ಲಿ ನಿವೇಶನದ ಸ್ವಾಧೀನವನ್ನು ನೀಡುವ ಮೂಲಕ ಕಾರ್ಯಗತಗೊಳಿಸಲಾಗಿದೆಯೆಂದು ಹಾಗೂ ಆಕೆಯ ಹೆಸರಿನಲ್ಲಿ ಖಾತಾ ಸಹ ನೋಂದಾಯಿತವಾಗಿದೆಯೆಂದು ವಾದಿಸಿ, ಇತರ ವಿಷಯಗಳ ಜೊತೆಗೆ, ಲಿಖಿತ ಹೇಳಿಕೆಯನ್ನು ಸಲ್ಲಿಸಲಾಗಿದೆ. ಶ್ರೀಮತಿ ಕೆ. ಸರಸ್ವತಿಯು ಸದರಿ ನಿವೇಶನವನ್ನು ಶ್ರೀಮತಿ ನಾಗವೇಣಿ ಪ್ರದೀಪ್‌ಗೆ ಮಾರಾಟ ಮಾಡಿದ್ದು, ಪ್ರತಿವಾದಿಯು ದಿನಾಂಕ: 28.3.2007ರಂದು ಸ್ವತ್ತನ್ನು ಖರೀದಿಸಿರುತ್ತಾನೆಂದು ಹೇಳಲಾಗಿತ್ತು. ಅಷ್ಟೇ ಅಲ್ಲದೆ, ವಾದಿಯ ಪತಿಯು ಪ್ರತಿವಾದಿಯ ವಿರುದ್ಧ ರಿಟ್ ಅರ್ಜಿ ಸಂಖ್ಯೆ: 34731/2011ನ್ನು ಸಲ್ಲಿಸಿದ್ದು, ಅದು ದಿನಾಂಕ: 14.09.2011ರಂದು ವಿಲೇ ಆಗಿರುತ್ತದೆಂದು ಹೇಳಲಾಗಿದೆ. ದಾವೆಯ ಅನುಸೂಚಿತ ಸ್ವತ್ತು ಪ್ರತಿವಾದಿಯ ನಿರಂಕುಶ ಸ್ವತ್ತಾಗಿದೆ ಮತ್ತು ಅವನು ಅದರ ಕಾನೂನುಬದ್ಧ ಸ್ವಾಧೀನ ಮತ್ತು ಅನುಭೋಗ ಹೊಂದಿರುತ್ತಾನೆ ಹಾಗೂ ದಾವೆಯು ವೆಚ್ಚಗಳ ಸಹಿತ ವಜಾ ಮಾಡಲು ತಕ್ಕದ್ದಾಗಿದೆಯೆಂದು ಹೇಳಲಾಗಿತ್ತು.

3. ವಾದವು ಸಮರ್ಥನೀಯವಾಗಿಲ್ಲ ಮತ್ತು ಕಾನೂನಿನಿಂದ ಪ್ರತಿಷೇಧಿತವಾಗಿದೆಯೆಂದು ತಿರಸ್ಕರಿಸಲು, ವಾದಕಾಲೀನ ಅರ್ಜಿ ಸಂಖ್ಯೆ: 3ನ್ನು ಪ್ರತಿವಾದಿಯು ಸಿಪಿಸಿ 7ನೇ ಆದೇಶದ 11ನೇ ನಿಯಮದಡಿ ಓದಲಾದ 151ನೇ ಪ್ರಕರಣದಡಿ ಸಲ್ಲಿಸಿರುತ್ತಾನೆ. ಅಧಿವಿಚಾರಣಾ ನ್ಯಾಯಾಧೀಶರು, ಪರಿಶೀಲನೆಗಾಗಿ ಅಂಶಗಳನ್ನು ಎತ್ತುವ ಮೂಲಕ ಮತ್ತು ಎರಡೂ ಪಕ್ಷಕಾರರು ಹಾಜರುಪಡಿಸಿದ ವಾದಗಳು ಹಾಗೂ ದಾಖಲೆಗಳ ಗುಣಾವಗುಣ ವಿವೇಚನೆಯ ನಂತರ, ದಿನಾಂಕ: 5.8.2014ರಂದು ಮೇಲೆ ಹೇಳಿದ ಆದೇಶವನ್ನು ಹೊರಡಿಸಿದ್ದಾರೆ.

4. ಅಪೀಲುದಾರನ ಪರ ಮಾನ್ಯ ವಕೀಲರಾದ ಶ್ರೀ ಎಸ್.ಎನ್. ಸಮೀರ್ ಹಾಗೂ ಪ್ರತ್ಯಪೀಲುದಾರನ ಪರ ಮಾನ್ಯ ವಕೀಲರಾದ ಶ್ರೀ ಟಿ.ಪಿ. ವಿವೇಕಾನಂದರವರ ವಾದಗಳನ್ನು ಆಲಿಸಲಾಗಿದೆ. ಅಪೀಲು ದಾಖಲೆಗಳನ್ನು ಅವಗಾಹಿಸಲಾಗಿದೆ. ಪರಿಶೀಲನೆಗಾಗಿನ ಅಂಶವು, ಸಿಪಿಸಿ 7ನೇ ಆದೇಶದ 11ನೇ ನಿಯಮದಡಿ ಸಲ್ಲಿಸಲಾದ ಅರ್ಜಿಯನ್ನು ನಿರ್ಣಯಿಸುವಾಗ, ಅರ್ಜಿಯಲ್ಲಿ ಮಾಡಲಾದ ಕೋರಿಕೆಯ ಸಮರ್ಥನೆಯಲ್ಲಿ, ಪ್ರತಿವಾದಿಯು ಸಲ್ಲಿಸಿದ ಲಿಖಿತ ಹೇಳಿಕೆ ಮತ್ತು ಇತರ ವಿಷಯಗಳನ್ನು ಪರಿಶೀಲಿಸಲಾಗುವುದೇ? ಎಂಬುದಾಗಿದೆ.

5. ಸದ್ಯದ ಮೊಕದ್ದಮೆಯಲ್ಲಿ, ಇಲ್ಲಿ ಪ್ರಶ್ನಿತವಾದ ವಾದಕಾಲೀನ ಅರ್ಜಿ ಸಂಖ್ಯೆ 3ರಲ್ಲಿ ಆದೇಶವನ್ನು ಹೊರಡಿಸುವಾಗ, ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಯು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಮತ್ತು ಇತರ ವಿಷಯ ಸಾಮಗ್ರಿಗಳಲ್ಲಿ ಮಾಡಲಾದ ದೃಢೋಕ್ತಿಗಳನ್ನು ಗಣನೆಗೆ ತೆಗೆದುಕೊಂಡಿದೆ.

6. ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಸರಣಿಯಿಂದ ಕಾನೂನನ್ನು ಸುವ್ಯವಸ್ಥಿತಗೊಳಿಸಲಾಗಿದೆ. ಸಿಪಿಸಿ 7ನೇ ಆದೇಶದ 11ನೇ ನಿಯಮದಡಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸುವಾಗ, ನ್ಯಾಯಾಲಯವು ವಾದ ಪತ್ರದಲ್ಲಿನ ದೃಢೋಕ್ತಿಗಳನ್ನು ಪರಿಶೀಲಿಸಬೇಕಾಗುತ್ತದೆ ಮತ್ತು ಪ್ರತಿವಾದಿಯು ಲಿಖಿತ ಹೇಳಿಕೆಯಲ್ಲಿ ಮಂಡಿಸಿದ ವಾದಗಳು ಅಸಂಬದ್ಧವಾಗಿರುತ್ತವೆ. ***ಸಿ. ನಟರಾಜನ್ –ವಿರುದ್ಧ– ಅಶಿಮ್ ಬಾಯ್*** [1]***, ರಾಮ್‌ಪ್ರಕಾಶ್ ಗುಪ್ತ –ವಿರುದ್ಧ– ರಾಜೀವ್ ಕುಮಾರ್ ಗುಪ್ತ*** [2]***, ಹರ್‌ದೇಶ್ ಓರ್ಸ್ (ಪ್ರೈ) ಲಿ. –ವಿರುದ್ಧ– ಹೆಡೆ ಅಂಡ್ ಕಂ*** [3]***, ಮಯರ್ (ಎಚ್.ಕೆ.) ಲಿ., –ವಿರುದ್ಧ– ವೆಸ್ಸೆಲ್ ಎಂ.ವಿ. ಫಾರ್ಚೂನ್ ಎಕ್ಸ್‌ಪ್ರೆಸ್*** [4]***, ಸೊಪನ್ ಸುಖದೇವ್ ಸಬ್ಲಿ –ವಿರುದ್ಧ– ಅಸ್ಸಿಸ್ಟೆಂಟ್ ಚಾರಿಟಿ ಕಮೀಷನರ್*** [5] ಹಾಗೂ ***ಸಲೀಂ ಭಾಯ್ –ವಿರುದ್ಧ– ಸ್ಟೇಟ್ ಆಫ್ ಮಹಾರಾಷ್ಟ್ರ*** [6]. ಈ ಮೇಲ್ಕಂಡ ಅಭಿಪ್ರಾಯವನ್ನು,

1. (2007) 14 ಎಸ್‌ಸಿಸಿ 183
2. (2007) 10 ಎಸ್‌ಸಿಸಿ 59
3. (2007) 5 ಎಸ್‌ಸಿಸಿ 614
4. (2006) 3 ಎಸ್‌ಸಿಸಿ 100
5. (2004) 3 ಎಸ್‌ಸಿಸಿ 137
6. (2003) 1 ಎಸ್‌ಸಿಸಿ 577

***ಭಾವುರಾಮ್ –ವಿರುದ್ಧ– ಜನಕ್ ಸಿಂಗ್ ಮತ್ತು ಇತರರು***[7] ಹಾಗೂ ***ಚರ್ಚ್ ಆಫ್ ಕ್ರೈಸ್ಟ್ ಚಾರಿಟಬಲ್ ಟ್ರಸ್ಟ್ ಅಂಡ್ ಎಜುಕೇಷನಲ್ ಚಾರಿಟಬಲ್ ಸೊಸೈಟಿ –ವಿರುದ್ಧ– ಪೊನ್ನಿಯಮ್ಮನ್ ಎಜುಕೇಶನಲ್ ಟ್ರಸ್ಟ್***[8] ಮೊಕದ್ದಮೆಗಳಲ್ಲಿ ಒತ್ತಿ ಹೇಳಲಾಗಿದೆ.

7. ***ಯಶವಂತ್ –ವಿರುದ್ಧ– ಸೀನಿಯರ್ ಮ್ಯಾನೇಜರ್ ಎ.ಬಿ.ಎನ್. ಅಮ್ರೋ ಬ್ಯಾಂಕ್ ಎನ್.ವಿ., ನವದೆಹಲಿ***[9], ಪರಿಶೀಲನೆಗಾಗಿ ಎತ್ತಲಾದ 1ನೇ ಅಂಶವು ಹೀಗಿದೆ:

> ''(i) ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ದಾಖಲಿಸಿರದಿದ್ದ ಮೊಕದ್ದಮೆಯಲ್ಲಿ ವಾದಪತ್ರವನ್ನು ತಿರಸ್ಕರಿಸಬಹುದೇ?

ಸದರಿ ಪ್ರಶ್ನೆಗೆ ಈ ಮುಂದಿನಂತೆ ಉತ್ತರಿಸಲಾಗಿದೆ:

> ''ಮೇಲೆ ಗಮನಿಸಲಾದ ನಿರ್ಣಯಗಳಲ್ಲಿನ ಕಾನೂನು ವಿವರಣೆಯಿಂದ ಸಿಪಿಸಿ 7ನೇ ಕ್ರಮಾದೇಶದ 11ನೇ ನಿಯಮದಡಿ ವಾದವನ್ನು ಪರಿಗಣಿಸುವಾಗ, ವಾದಪತ್ರದಲ್ಲಿನ ವಾದವನ್ನು ಪರಿಗಣಿಸುವುದು ನ್ಯಾಯಾಲಯದ ಕರ್ತವ್ಯವಾಗಿದೆ ಎಂಬಷ್ಟರಮಟ್ಟಿಗೆ ನ್ಯಾಯಾಲಯವು ವಾದ ಪತ್ರದಲ್ಲಿನ ದೃಢೋಕ್ತಿಗಳನ್ನು ಮಾತ್ರ ಪರಿಶೀಲಿಸಬೇಕಾಗುತ್ತದೆಯೆಂದು ಮತ್ತು ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳು ಮುಖ್ಯವಲ್ಲವೆಂದು ಹಾಗೂ ಆ ಹಂತದಲ್ಲಿ, ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಯು ಮಂಡಿಸಿದ ಪ್ರತಿವಾದವು

7. (2012) 8 ಎಸ್‌ಸಿಸಿ 701
8. (2012)8 ಎಸ್‌ಸಿಸಿ 706
9. ಐಎಲ್ಆರ್ 2013 ಕೆಎಆರ್ 3903

ಪೂರ್ತಿ ಅಸಂಗತವಾಗಿದೆಯೆಂಬುದು ಸ್ಪಷ್ಟವಾಗಿದೆ. ಹೀಗಾಗಿ, ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಸಲ್ಲಿಸುವುದಕ್ಕಿಂತ ಮುಂಚೆ ವಾದಪತ್ರವನ್ನು ತಿರಸ್ಕರಿಸಲಾಗದು ಎಂಬುದಾಗಿ ಮಂಡಿಸಿದ ವಾದವು ಗುಣಾರ್ಹತೆಯನ್ನು ಹೊಂದಿಲ್ಲ".

8. ಸಿಪಿಸಿ 7ನೇ ಕ್ರಮಾದೇಶ 11ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾಡಿದ ವಾದಪತ್ರದ ತಿರಸ್ಕರಣೆಯು ಒಂದು ಸಿವಿಲ್ ಕ್ರಮವನ್ನು ಪ್ರಾರಂಭದಲ್ಲಿಯೇ ಅಂದರೆ, ದಾವೆಯ ಅಧಿವಿಚಾರಣೆ ನಡೆಸದೆ ಮುಕ್ತಾಯಗೊಳಿಸಲು ನ್ಯಾಯಾಲಯಕ್ಕೆ ಪ್ರದತ್ತವಾದ ತೀವ್ರ ಪರಿಣಾಮದ ಅಧಿಕಾರವಾಗಿದ್ದು, ಸದರಿ ಅಧಿಕಾರವನ್ನು ಚಲಾಯಿಸುವುದಕ್ಕೆ ಮುಂಚಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಅನ್ವಯಿಸತಕ್ಕದ್ದು.

9. ಮೇಲೆ ಗಮನಿಸಲಾದ ನಿರ್ಣಯಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಅನುಪಾತದ ದೃಷ್ಟಿಯಿಂದ, ವಾದಪತ್ರವು ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸುತ್ತದೆಯೇ? ಅಥವಾ ದಾವೆಯನ್ನು ಯಾವುದೇ ಕಾನೂನಿನಡಿ ಪ್ರತಿಬಂಧಿಸಲಾಗಿದೆಯೇ? ಎಂಬುದನ್ನು ತಿಳಿಯಲು, ಒಟ್ಟಾಗಿ ಓದಬೇಕಾಗಿರುವುದು ವಾದಪತ್ರದಲ್ಲಿನ ದೃಢೋಕ್ತಿಗಳನ್ನು ಎನ್ನಲಾಗಿದೆ. ಸಿಪಿಸಿ 7ನೇ ಕ್ರಮಾದೇಶದ 11ನೇ ನಿಯಮದಡಿಯಲ್ಲಿನ ಅಧಿಕಾರವನ್ನು ಚಲಾಯಿಸುವ ಹಂತದಲ್ಲಿ, ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ನಿರೂಪಿಸಲಾದ ಪ್ರತಿವಾದಿಯ ವಾದವು ಅಷ್ಟೇನೂ ಮಹತ್ವದ್ದಲ್ಲ. ವಾದಪತ್ರದಲ್ಲಿನ ದೃಢೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ದಾವೆಯು ಯಾವುದೇ ಕಾನೂನಿನಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದಪತ್ರವನ್ನು ತಿರಸ್ಕರಿಸಬಹುದಾಗಿದೆ. ಇಲ್ಲದಿದ್ದಲ್ಲಿ, ಪಕ್ಷಕಾರರ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ.

10. ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯು, ಮೇಲೆ ಗಮನಿಸಲಾದ ನಿರ್ಣಯಗಳಲ್ಲಿ ವಿಧಿಸಿರುವ ಸ್ಥಾಪಿತ ನಿಯಮಗಳೊಂದಿಗೆ ಅನುರೂಪವಾಗಿಲ್ಲದಿರುವ

ಕಾರಣದಿಂದ, ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು ಬದಿಗಿರಿಸುವುದೆಂದು ಮಾನ್ಯ ವಕೀಲ ಶ್ರೀ ಟಿ.ಪಿ. ವಿವೇಕಾನಂದರವರು ಸರಿಯಾಗಿಯೇ ಅಂಗೀಕರಿಸಿದ್ದಾರೆ ಮತ್ತು ಅಧಿವಿಚಾರಣಾ ನ್ಯಾಯಾಲಯಕ್ಕೆ ದಾವೆಯನ್ನು ತ್ವರಿತವಾಗಿ ನಿರ್ಣಯಿಸಲು ನಿರ್ದೇಶಿಸಿದ್ದಾರೆ. ಹಾಗಿಲ್ಲದಿದ್ದರೂ ಸಹ, ಲಿಖಿತ ಹೇಳಿಕೆಯಲ್ಲಿ ಮಂಡಿಸಲಾದಂತೆ, ಪ್ರತಿವಾದಿಯ ನಿಲುವನ್ನು ಉಲ್ಲೇಖಿಸುವ ಮೂಲಕ ಹಾಗೂ ಅದರೊಂದಿಗೆ ಹಾಜರುಪಡಿಸಲಾದ ದಾಖಲೆಗಳ ಗುಣಾವಗುಣ ವಿವೇಚನೆಯ ಮೂಲಕ ಅಧಿವಿಚಾರಣಾ ನ್ಯಾಯಾಧೀಶರು ವಾದಪತ್ರವನ್ನು ತಿರಸ್ಕರಿಸುವಲ್ಲಿ ಕಾನೂನುಬಾಹಿರತೆಯನ್ನು ಸುಸ್ಪಷ್ಟವಾಗಿ ಎತ್ತಿತೋರಿಸಿದ್ದಾರೆ.

ಈ ಹಿಂದಿನ ಚರ್ಚೆಗೆ ಸಂಬಂಧಿಸಿದಂತೆ, ಪ್ರಶ್ನಿತ ತೀರ್ಪು ಮತ್ತು ಐತೀರ್ಪು ಕಾನೂನುಬಾಹಿರವಾಗಿದ್ದು, ಅದನ್ನು ಬದಿಗಿರಿಸಲಾಗಿದೆ ಹಾಗೂ ದಾವೆಯನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಲಾಗಿದೆ. ವಿವಾದಾಂಶಗಳನ್ನು ಇನ್ನೂ ರೂಪಿಸಿಲ್ಲದಿರುವುದರಿಂದ, ದಿನಾಂಕ: 16.4.2016ರಂದು ಕರಡು ವಿವಾದಾಂಶಗಳನ್ನು ಸಲ್ಲಿಸಲು ಎರಡೂ ಪಕ್ಷಕಾರರಿಗೆ ಸ್ವಾತಂತ್ರ್ಯವಿದೆ. ದಿನಾಂಕ: 30.04.2016ರಂದು ಅಥವಾ ಅದಕ್ಕಿಂತ ಮುಂಚೆ ಅಧಿವಿಚಾರಣಾ ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸತಕ್ಕದ್ದು. ವಾದಿಯು ದಿನಾಂಕ: 30.7.2016ಕ್ಕಿಂತ ಮುಂಚೆ ತನ್ನ ಕಡೆಯ ಸಾಕ್ಷ್ಯವನ್ನು ಒದಗಿಸತಕ್ಕದ್ದು ಮತ್ತು ಪೂರ್ಣಗೊಳಿಸತಕ್ಕದ್ದು ಹಾಗೂ ಪ್ರತಿವಾದಿಯು ದಿನಾಂಕ: 29.09.2016ಕ್ಕಿಂತ ಮುಂಚೆ ತನ್ನ ಕಡೆಯ ಸಾಕ್ಷ್ಯವನ್ನು ಒದಗಿಸತಕ್ಕದ್ದು ಹಾಗೂ ಪೂರ್ಣಗೊಳಿಸತಕ್ಕದ್ದು. ದಾವೆಯನ್ನು ದಿನಾಂಕ: 30.11.2016ರಂದು ಅಥವಾ ಅದಕ್ಕಿಂತ ಮುಂಚೆ ತ್ವರಿತವಾಗಿ ತೀರ್ಮಾನಿಸತಕ್ಕದ್ದು.

ಎರಡೂ ಕಡೆಯ ಪಕ್ಷಕಾರರಿಗೆ ದಿನಾಂಕ: 16.04.2016ರಂದು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಮುಂದಿನ ಆದೇಶಗಳನ್ನು ಸ್ವೀಕರಿಸಲು ನಿರ್ದೇಶಿಸಲಾಗಿರುತ್ತದೆ. ಎಲ್‌ಸಿಆರ್ ಅನ್ನು ತಕ್ಷಣವೇ ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸತಕ್ಕದ್ದು.

---